ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

1)

	1989	1990	1991	1992 (31-1-92 ರವರೆಗೆ)
ವರದಕ್ಷಿಣೆ ಸಾವು ಪ್ರಕರಣಗಳು	190	193	221	14
ವರದಕ್ಷಿಣೆ ಕಿರುಕುಳ ಪ್ರಕರಣಗಳು	752	887	892	59

2)

ವರ್ಷ	ವರದಕ್ಷಿಣೆ ಪ್ರಕರಣಗಳಲ್ಲಿ ಮೃತರಾದವರು
1989	190
1990	193
1991	221
1992 (31-1-92ರವರೆಗೆ)	14

3) 1) ವರದಕ್ಷಿಣೆಯ ಬಾಬ್ತು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ನಿವಾರಿಸಲು ವರದಕ್ಷಿಣೆ ನಿರೋಧ ದಳವೆಂಬ ಒಂದು ವಿಶೇಷ ದಳವನ್ನು ಅಪರಾಧ ತನಿಖಾ ವಿಭಾಗದಲ್ಲಿ 1989 ರಲ್ಲಿ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್. ಮಹಿಳಾ ಪೊಲೀಸ್ ಅಧಿಕಾರಿಗಳು ಮತ್ತು ಇತರ ಪೂರಕ ಸಿಬ್ಬಂದಿಯೊಂದಿಗೆ ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಸರ್ಕಾರವು ವರದಕ್ಷಿಣೆ ನಿರೋಧ ದಳಕ್ಕೆ ಹೆಚ್ಚುವರಿಯಾಗಿ 11 ಜನ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಹುದ್ದೆಯ ಮಂಜೂರಾತಿಯನ್ನು ನೀಡಿರುತ್ತದೆ.

2) ವರದಕ್ಷಿಣೆ ನಿಷೇಧ ಕಾಯ್ದೆ 1984ನ್ನು 1985 ಮತ್ತು 1986ರಲ್ಲಿ ತಿದ್ದುಪಡಿ ಮಾಡಿ. ಇಂಥಹ ಹಾವಳಿಯನ್ನು ತಡೆಗಟ್ಟಲು ಹೆಚ್ಚಿನ ಶಿಕ್ಷೆ ನೀಡಬಹುದಾಗಿದೆ. ಭಾರತೀಯ ದಂಡ ಸಂಹಿತೆಯಲ್ಲಿ ಕಲಂ 304(ಬಿ) ಎಂಬ ಕಲಂ ಅನ್ನು ವರದಕ್ಷಿಣೆ ಅಪರಾಧ ತಡೆಗಟ್ಟಲು ಅಳವಡಿಸಲಾಗಿದೆ.

3) ಎಲ್ಲಾ ವರದಕ್ಷಿಣೆ ಪ್ರಕರಣಗಳಲ್ಲಿ. ಡೆಪ್ಯೂಟಿ ಪೊಲೀಸ್ ಸೂಪರಿಂಟೆಂಡೆಂಟ್ ಅಥವಾ ಅದಕ್ಕೆ ಮೇಲ್ಪಟ್ಟ ಅಧಿಕಾರಿಯವರು ತನಿಖೆಯನ್ನು ಕೈಗೊಳ್ಳುತ್ತಾರೆ. ಮುಖ್ಯವಾದ ಪ್ರಕರಣಗಳನ್ನು ಅಪರಾಧ ತನಿಖಾ ವಿಭಾಗವು ತೆಗೆದುಕೊಳ್ಳುವುದು.

ಅಬಕಾರಿ ಇಲಾಖೆಯಲ್ಲಿ ಉಪ ಆಯುಕ್ತರ ಹುದ್ದೆಗಳ ಸೃಷ್ಟಿ:

1816. ಶ್ರೀ ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಹೊಸದಾಗಿ ಸೃಷ್ಟಿಸಿರುವ ಉಪ ಆಯುಕ್ತರ ಹುದ್ದೆಗಳೆಷ್ಟು?

ಅ) ಈ ಸೃಷ್ಟಿಸಿದ ಹುದ್ದೆಗಳಿಂದ ಸರ್ಕಾರಕ್ಕೆ ವರ್ಷವೊಂದಕ್ಕೆ ತಗಲುವ ವೆಚ್ಚವೆಷ್ಟು?

ಆ) ಹಾಲಿ ಇದ್ದ ಸಿಬ್ಬಂದಿ ವರ್ಗದಿಂದ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲವೇ?

ಈ) ಈ ಹುದ್ದೆಗಳನ್ನು ಸೃಷ್ಟಿಸಿರುವ ಔಚಿತ್ಯವೇನಿತ್ತು?

ಶ್ರಿ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು) :

ಅ) 23.

ಆ) ವರ್ಷಕ್ಕೆ ರೂ. 52.75 ಲಕ್ಷ.

ಇ) ಆಬಕಾರಿ ಉಪ ಆಯುಕ್ತರು ಹುದ್ದೆಗಳನ್ನು ನ್ಯಾಯಮೂರ್ತಿ ದೇಸಾಯಿ ಆಯೋಗದ ಸಲಹೆಯಂತೆ ಆಬಕಾರಿ ನಿಯಮ ಮತ್ತು ಎನ್‌ಫೋರ್ಸ್‌ಮೆಂಟ್ ಕಾಯಿದೆಯನ್ನು ಅನುಷ್ಠಾನಗೊಳಿಸಲು ಮತ್ತು ರೆವಿನ್ಯೂ ಜಿಲ್ಲಾಧಿಕಾರಿಗಳ ಹೆಚ್ಚುವರಿ ಕೆಲಸವನ್ನು ಕಡಿಮೆ ಮಾಡಲೂ ಸೃಷ್ಟಿಸಲಾಗಿದೆ.

ಈ) - " -

ಬೆಂಗಳೂರು ನಗರದಲ್ಲಿ ನಡೆದ ಡಕಾಯಿತಿ ಪ್ರಕರಣಗಳ ಪತ್ತೆ

1182 (1731) ಶ್ರೀ ಆರ್.ಮಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1987-88. 1988-89. 1989-90. 1990-91 ಹಾಗೂ 1991-92ರ ಜನವರಿ 31ರವರೆವಿಗೆ ಬೆಂಗಳೂರು ನಗರ ಹಾಗೂ ಬೆಂಗಳೂರು ನಗರದ ಹೊರವಲಯದಲ್ಲಿ ಎಷ್ಟು ಡಕಾಯಿತಿ ಪ್ರಕರಣಗಳು ಪತ್ತೆಯಾಗಿವೆ?

ಆ) ಈ ಪ್ರಕರಣಗಳಲ್ಲಿ ಸಂಭವಿಸಿದ ಆಸ್ತಿ ಪಾಸ್ತಿಗಳ ನಷ್ಟದ ಅಂದಾಜು ವಿವರಗಳೇನು?

ಇ) ಇದುವರೆವಿಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಈ) ಮುಂದಿನ ದಿನಗಳಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಹೊರವಲಯೆಗಳಲ್ಲಿ ಡಕಾಯಿತಿಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು) :

ಅ)

1987	1988	1989	1990	1991	1992
3	3	2	6	5	ಇಲ್ಲ.

ಆ) 1987 ರೂ. 1.36.900-00
1988 ರೂ. 2.72.870-00
1989 ರೂ. 3.83.200-00
1990 ರೂ. 6.46.900-00
1991 ರೂ. 3.80.050-00
1992 ರೂ. ಇಲ್ಲ.